ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 ದಿನಾಂಕ: 07–08–2019

**ಪತ್ರಿಕಾ ಪ್ರಕಟಣೆ**

## ಇ–ಸಂಗ್ರಹಣಾ ತಂತ್ರಾಂಶ ತಾತ್ಕಾಲಿಕ ಸ್ಥಗಿತ

ಬೆಂಗಳೂರು, ಆಗಸ್ಟ್ 7 (ಕರ್ನಾಟಕ ವಾರ್ತೆ) :

ರಾಜ್ಯ ಸರ್ಕಾರದ ಇ–ಸಂಗ್ರಹಣಾ ತಂತ್ರಾಂಶದ ಇ.ಎಂ.ಡಿ. ಮರುಪಾವತಿ ಮೊಡ್ಯೂಲ್ ಮೇಲೆ ಕೆಲವು ಬಾಹ್ಯ ಸೈಬರ್ ದಾಳಿಗಳು ಪತ್ತೆಯಾದ ಹಿನ್ನೆಲೆಯಲ್ಲಿ ಕಳೆದ ಆರು ದಿನಗಳಿಂದ ಈ ತಂತ್ರಾಂಶವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಕಳೆದ ಎಂಟು ವರ್ಷಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಅನ್ವಯ ಎಲ್ಲಾ ಟೆಂಡರ್‌ಗಳನ್ನು ಇ–ಸಂಗ್ರಹಣಾ ತಂತ್ರಾಂಶ **https://eproc.karnataka.gov.in** ದಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ಆದರೆ, ಇದೀಗ ಬಾಹ್ಯ ಸೈಬರ್ ದಾಳಿಗಳು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದ್ದು ಭಾರತ ಸರ್ಕಾರದ **CERT-In** ಸಂಸ್ಥೆಗೂ ವರದಿ ಸಲ್ಲಿಸಲಾಗಿದೆ. **CERT-In** ಸಂಸ್ಥೆಯ ವಿಚಾರಣೆ ಮುಗಿದ ನಂತರ ಈ ಸಂಸ್ಥೆಯ ಶಿಫಾರಸ್ಸುಗಳನ್ವಯ ವ್ಯವಸ್ಥೆಯನ್ನು ಸುಧೃಢಪಡಿಸಿ ಇ–ಸಂಗ್ರಹಣಾ ತಂತ್ರಾಂಶವನ್ನು ಕೆಲವು ದಿನಗಳೊಳಗೆ ಮರು ಸ್ಥಾಪಿಸಲಾಗುವುದು ಎಂದು ಇ–ಆಡಳಿತ ಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## e-Procurement Portal temporarily stopped

**Bengaluru, August 7 (Karnataka Information) :**

**In view of the detection of some external cyber attacks on the E M D refund sub-system of the e-Procurement portal**

**https://eproc.karnataka.gov.in of the State Government has been stopped temporarily from the last six days.**

**All tender processes in Karnataka as per Karnataka Transparency in Public Procurement Act was successfully functioning for the last eight years. The portal was shut down temporarily for system repairs. A police complaint has been filed with the cyber police station and matter has also been reported to CERT-In. Soon after CERT-In enquiry is over and system is hardened as per CERT-In recommendations the eProc application would be restored back in a couple of days according to Chief Executive Officer of the e-Governance Centre.**

## ಸಂತಾಪ

ಬೆಂಗಳೂರು, ಆಗಸ್ಟ್ 7 (ಕರ್ನಾಟಕ ವಾರ್ತೆ)

ಮಾಜಿ ವಿದೇಶಾಂಗ ಸಚಿವೆ ಬಿಜೆಪಿಯ ಹಿರಿಯ ನಾಯಕಿ ಶ್ರೀಮತಿ ಸುಷ್ಮಾ ಸ್ವರಾಜ್ ಅವರು ಹೃದಯಾಘಾತದಿಂದ ನಿಧನರಾಗಿರುವುದು ತುಂಬಾ ನೋವಿನ ವಿಷಯವಾಗಿದೆ

ಶ್ರೀಮತಿ ಸುಷ್ಮಾ ಸ್ವರಾಜ್ ಅವರು ದೇಶ ಕಂಡ ಅಪ್ರತಿಮ ವಾಗ್ಮಿ, ದಕ್ಷ ಆಡಳಿತಗಾರರಾಗಿದ್ದರು. ಅತೀ ಚಿಕ್ಕ ವಯಸ್ಸಿನಲ್ಲಿಯೇ ಹರಿಯಾಣ ಸರ್ಕಾರದಲ್ಲಿ ಸಚಿವೆಯಾಗಿದ್ದ ಕೀರ್ತಿ ಅವರದಾಗಿತ್ತು. ಅವರು ಏಳು ಬಾರಿ ಸಂಸದೆಯಾಗಿ, ಮೂರು ಬಾರಿ ವಿಧಾನಸಭಾ ಸದಸ್ಯೆಯಾಗಿ ಆಯ್ಕೆಯಾಗಿದ್ದರು. ಎರಡನೇ ಬಾರಿ ವಾಜಪೇಯಿ ಸರ್ಕಾರದಲ್ಲಿ ಅವರು ದೂರಸಂಪರ್ಕ ಸಚಿವಾಲಯ ಮಾಹಿತಿ ಮತ್ತು ಪ್ರಸಾರದ ಕೇಂದ್ರ ಸಂಪುಟ ಸಚಿವೆಯಾಗಿದ್ದರು. 2014 ರಿಂದ 2019 ರವರೆಗೆ ಮೋದಿ ಸಚಿವ ಸಂಪುಟದಲ್ಲಿ ವಿದೇಶಾಂಗ ಸಚಿವೆಯಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದರು. ಯಾರಾದರೂ ಕಷ್ಟಕ್ಕೀಡಾಗಿ ಒಂದು ಟ್ವೀಟ್ ಮೂಲಕ ತಮ್ಮ ನೋವನ್ನು ತೋಡಿಕೊಂಡಿದ್ದರೂ ತಕ್ಷಣ ಸ್ಪಂದಿಸಿ ಪರಿಹಾರಕ್ಕಾಗಿ ಶ್ರಮಿಸಿ, ಜನಪ್ರಿಯರಾಗಿದ್ದರು.

ಸದಾ ಹಸನ್ಮುಖಿಯಾಗಿ, ನನ್ನಂತಹ ಲಕ್ಷಾಂತರ ಕಾರ್ಯಕರ್ತರಿಗೆ ರಾಷ್ಟ್ರ ಕಾರ್ಯದಲ್ಲಿ ತೊಡಗಲು ಪ್ರೇರಣೆಯಾಗಿದ್ದರು. ಆದರ್ಶ, ಮೌಲ್ಯಯುತ ರಾಜಕಾರಣಿ ಶ್ರೀಮತಿ ಸುಷ್ಮ ಸ್ವರಾಜ್ ಅವರು ಇಂದು ನಮ್ಮನಗಲಿದ್ದಾರೆ. ದೇಶಕ್ಕಾಗಿ ತಮ್ಮನ್ನು ಸಮರ್ಪಿಸಿದ ಈ ಮಹಾನ್ ಚೇತನಕ್ಕೆ ನಮನ ಪೂರ್ವಕವಾಗಿ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಿದ್ದೇನೆ ಎಂದು ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

# ಮಕ್ಕಳಿಗಾಗಿ ಬಾಲಭವನದಲ್ಲಿ ವಿವಿಧ ಸ್ಪರ್ಧೆ

ಬೆಂಗಳೂರು, ಆಗಸ್ಟ್ 7 (ಕರ್ನಾಟಕ ವಾರ್ತೆ)

ಬಾಲ ಭವನವು ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ 5 ರಿಂದ 16 ವರ್ಷದ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಬಾಲ ಭವನ ಕಬ್ಬನ್ ಉದ್ಯಾನವನ ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಅಂದು ಬೆಳಿಗೆ 9.00 ಧ್ವಜಾರೋಹಣ. ನಂತರ 10–00 ಗಂಟೆಯಿಂದ 5 ರಿಂದ 16 ವರ್ಷದ ಮಕ್ಕಳಿಗೆ ದೇಶಭಕ್ತಿ ಗೀತೆ ಗಾಯನ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 11–00 ಗಂಟೆಗೆ 5 ರಿಂದ 9 ವರ್ಷದ ಮಕ್ಕಳಿಗೆ ಚಿತ್ರ ಬಿಡಿಸುವ ಸ್ಪರ್ಧೆ (ಹಾಳೆಗಳನ್ನು ಬಿಟ್ಟು ಉಳಿದ ಸಾಮಗ್ರಿಗಳನ್ನು ಮಕ್ಕಳೇ ತರತಕ್ಕದ್ದು ಹಾಗೂ ವಿಷಯವನ್ನು ಸ್ಥಳದಲ್ಲೇ ನೀಡಲಾಗುವುದು) ಹಾಗೂ 10ರಿಂದ 16 ವರ್ಷದವರಗಿನ ಮಕ್ಕಳಿಗೆ –'ಮಗಳನ್ನು ರಕ್ಷಿಸಿ ಮಗಳನ್ನು ಓದಿಸಿ– ಭೇಟಿ ಬಚಾವೋ ಭೇಟಿ ಪಡಾವೋ' ವಿಷಯದ ಕುರಿತು ಚಿತ್ರಕಲೆ ಸ್ಪರ್ಧೆಯನ್ನು ಹಮ್ಮಿಕೊಂಡಿದೆ. ಬಿತ್ರ ಬಿಡಿಸಲು 15 ಫ಼ 11 (ಇಂಚ್) ಅಳತೆಯ ಹಾಳೆಗಳನ್ನು ಮಾತ್ರ ನೀಡಲಗವುದು. ಉಳಿದ ಸಾಮಗ್ರಿಗಳನ್ನು ಮಕ್ಕಳೇ ತರತಕ್ಕದ್ದು. ಸ್ಪರ್ಧೆಯಲ್ಲಿ ಭಾಗವಹಿಸುವ ಮಕ್ಕಳು ಅರ್ಧ ಗಂಟೆ ಮುಂಚಿತವಾಗಿ ಹಾಜರಿರತಕ್ಕದ್ದು.

ಸಾಂಸ್ಕೃತಿಕ ಕಾರ್ಯಕ್ರಮ ಮಧ್ಯಾಹ್ನ 2–30 ಗಂಟೆಗೆ. ಮಧ್ಯಾಹ್ನ 3–00 ಗಂಟೆಗೆ ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಪ್ರಮಾಣ ಪತ್ರ ವಿತರಣೆ ಹಾಗೂ ವಿಶೇಷ ಮಕ್ಕಳಿಗೆ ಬಹುಮಾನ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವ ಆಸಕ್ತ ಮಕ್ಕಳು ಆಗಸ್ಟ್ 14 ರ ಒಳಗೆ ವಿವರಗಳನ್ನು (ರಜಾ ದಿನಗಳನ್ನು ಹೊರತುಪಡಿಸಿ) ಕಚೇರಿ ವೇಳೆಯಲ್ಲಿ ನೋಂದಾಯಿಸಬಹುದಾಗಿದೆ

ಹೆಚ್ಚಿನ ವಿವರಗಳಿಗೆ ಹಾಗೂ ನೋಂದಣಿಗಾಗಿ ಕಾರ್ಯದರ್ಶಿಗಳ ಕಚೇರಿ , ಬಾಲಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿ ಖುದ್ದಾಗಿ ಅಥವಾ ದೂರವಣಿ ಸಂಖ್ಯೆ: 080 – 22864189, Email:- secybalbhavan.bng@gmail.com.ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಬಾಲ ಭವನ ಸೊಸೈಟಿ ಪ್ರಕಟಣೆ ತಿಳಿಸಿದೆ.